ಉತ್ತರ ಸಿಗಲಿಲ್ಲ, ಒಂದೇ ಒಂದು ಪ್ರಶ್ನೆಗೆ ಉತ್ತರ ಸಿಕ್ಕಿರುವುದು. ಬೇರೆ ಏನೋ ಹುಡುಕುವಂಥಾದ್ದು ಏನಿಲ್ಲ.

ಶ್ರೀ ಎಸ್.ಆರ್. ಮೋರೆ : ನಾವು ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸ ಟೈಮ್ ಕೇಳಿದ್ದೀರಿ?

ಶ್ರೀ ಎಸ್. ಆರ್. ಮೋರೆ : 20 ದಿವಸ ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : 20 ದಿವಸ ಟೈಮ್ ಕೇಳಿದ್ದೀರಾ?

ಶ್ರೀ ಎಸ್. ಆರ್. ಮೋರೆ : ನಾವು ವಿವರ ಕೊಡಬೇಕಾಗುತ್ತದೆ. ಅವಸರದಲ್ಲಿ ಸುಮ್ಮನೇ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಪ್ರಶ್ನೆ ಇರುವುದು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆಯೇ, ಉತ್ತರ ಬಂದಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಮೋರೆ : ಅದು ದೆಹಲಿಯಿಂದ ಬರಬೇಕು.

ಅಧ್ಯಕ್ಷರು : ನಿಮ್ಮ ಸೆಕ್ರಟರಿಯೇಟ್ ಫೈಲ್ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಉತ್ತರ ಬಂದಿದ್ದರೆ ಬಂದಿದೆ ಇಂತಹ ತಾರೀಖಿಗೆ ಎಂದು ಹೇಳಿ. ಬಂದಿಲ್ಲದಿದ್ದರೆ ಬಂದಿಲ್ಲ ಎಂದು ಹೇಳಿ. ನಾನು ಈ ಪ್ರಶ್ನೆಯನ್ನು 27ನೇ ತಾರೀಖಿಗೆ ಹಾಕುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು 27ನೇ ತಾರೀಖಿಗೆ ತೆಗೆದುಕೊಳ್ಳಿ. ಪರವಾಗಿಲ್ಲ. ಈಗ ಏನು ಆಯಿತು. ಮಧ್ಯ ಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಎಲ್ಲಾ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಆಗಿದೆ ಎಂದು ನಾನು ಹೇಳಿದ್ದೆ. ಮಧ್ಯ ಪ್ರದೇಶದಲ್ಲಿ ಆ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಮಾಡಿಲ್ಲ ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ನೇರವಾದ ಪ್ರಶ್ನೆ ಕೇಳಿದ್ದೆ. ಏಕೆಂದರೆ ಸರ್ಕಾರ ಅಧಿಕೃತವಾಗಿ ಉತ್ತರ ಕೊಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : 27ನೇ ತಾರೀಖು ನಿಮ್ಮ ಪ್ರಶ್ನೆ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ಮಧ್ಯಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಇಂಪ್ಲಿಮೆಂಟ್ ಮಾಡಿಲ್ಲ ಎಂದು. ಇವತ್ತು ಸರ್ಕಾರ ಅಧಿಕೃತವಾಗಿ ಹೇಳಲಿ. ಆ ಕಂಡೀಷನ್ ತೆಗೆದುಹಾಕಿ ರೈತರ ಸಾಲ ಮನ್ನಾ ಮಾಡಿದೆಯೇ ಅಥವಾ ಇಲ್ಲ ಎಂದು.

ಅಧ್ಯಕ್ಷರು : ಶ್ರೀನಿವಾಸಯ್ಯರವರೆ, ನಿಮ್ಮ ಪ್ರಶ್ನೆ 27ನೇ ತಾರೀಖಿಗೆ ಬರುತ್ತದೆ.

ಶ್ರೀ ಮಾಟಾಳ್ ನಾಗರಾಜ್ : ಅವರು ಇರುವುದರಿಂದ...

ತುಮಕೂರಿನ ಅಂತರಸನ ಹಳ್ಳಿಗೆ M.V.E.S. ವಿದ್ಯುತ್ ಕೇಂದ್ರ.

3431 - ಶ್ರೀ ಎಸ್. ಷಫಿ ಅಹಮದ್ (ತುಮಕೂರು): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಅಂತರಸನಹಳ್ಳಿ ಎಂ. ವಿ. ಇ. ಎಸ್. ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ಕೆಲಸದ ಪ್ರಗತಿಯು ಯಾವ ಹಂತದಲ್ಲಿದೆ?

ಇ) ತುಮಕೂರು ಜಿಲ್ಲೆಯ ವಿದ್ಯುದ್ಬಲವನ್ನು ಉತ್ತಮಗೊಳಿಸಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಈ) ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೋಜನೆಗಳು ಮಂಜೂರಾಗಿವೆ ಮತ್ತು ಈ ಯೋಜನೆ ಕೆಲಸಗಳು ಪ್ರಗತಿಯಲ್ಲಿವೆಯೇ? ಇದ್ದರೆ, ಈ ಕೆಲಸಗಳು ಯಾವ ಹಂತದಲ್ಲಿವೆ ಮತ್ತು ಇದರ ಮೇಲೆ ಹೂಡಿರುವ ಹಣ ಎಷ್ಟು?

ಉ) ಇವು ಯಾವಾಗ ಪೂರ್ಣಗೊಳ್ಳಲಿದೆ ಮತ್ತು ಇದರಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ತುಮಕೂರು ತಾಲ್ಲೂಕಿನ ಅಂತರಸನಹಳ್ಳಿಯಲ್ಲಿ 220:66 ಕೆ. ವಿ. ಮತ್ತು 66:11ಕೆ. ವಿ. ವಿದ್ಯುತ್ ಉಪ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಎರಡೂ ವಿದ್ಯುತ್ ಉಪ ಕೇಂದ್ರಗಳ ಕೆಲಸಗಳು ಪ್ರಗತಿಯಲ್ಲಿವೆ.

ಇ) ತುಮಕೂರು ತಾಲ್ಲೂಕಿನ ವಿದ್ಯುದ್ಬಲದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮಂಡಳಿಯು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ವಿಶ್ವ ಬ್ಯಾಂಕ್ ನೆರವಿನೊಂದಿಗೆ ಅಂತರಸನಹಳ್ಳಿಯಲ್ಲಿ 220:66 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು. ಇನ್ನೊಂದು 100 ಎಂ. ವಿ. ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಉದ್ದೇಶವೂ ಇದೆ.

2) ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 66.11 ಕೆ. ವಿ. ಸಾಮರ್ಥ್ಯದ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಿರುವುದು. 12:5 ಎಂ.ವಿ. ಎ. ಸಾಮರ್ಥ್ಯದ ಒಂದು ವಿದ್ಯುತ್ ಪರಿವರ್ತಕವನ್ನು ಸ್ಥಾಪಿಸುವ ಉದ್ದೇಶವೂ ಇದೆ.

3) 66:11 ಕೆ.ವಿ. ಹಿರೇಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿರುವ 8 ಎಂ.ವಿ.ಎ. ಆಫ್ ಲೋಡ್ ವಿದ್ಯುತ್ ಪರಿವರ್ತಕವನ್ನು ಅನ್ ಲೋಡ್ ವ್ಯವಸ್ಥೆಯಿರುವ ವಿದ್ಯುತ್ ಪರಿವರ್ತಕದೊಂದಿಗೆ ಬದಲಾಯಿಸುವುದು.

ಈ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 127.92 ಮೆಗಾ ವ್ಯಾಟ್ಸ್ ಸಾಮರ್ಥ್ಯದ ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಬೆಂಗಳೂರಿನ ಹತ್ತಿರವಿರುವ ಯಲಹಂಕದಲ್ಲಿ ಸ್ಥಾಪಿಸುತ್ತಿದ್ದು ಇದರ ಕೆಲಸಕಾರ್ಯಗಳು ಪ್ರಗತಿಯಲ್ಲಿವೆ. ಇದಕ್ಕೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದು ಸಿವಿಲ್ ಅಭಿಯಾಂತ್ರಿಕ ಕಾಮಗಾರಿಗಳು ಪ್ರಗತಿಯಲ್ಲಿವೆ. ಜುಲೈ 1991ರ ಅಂತ್ಯದಲ್ಲಿರುವಂತೆ ಈ ಯೋಜನೆಗೆ 41.36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ಇನ್ನಿತರ 14 ಯೋಜನೆಗಳನ್ನು (ಜಲವಿದ್ಯುತ್, ಶಾಖೋತ್ಪನ್ನ ಮತ್ತು ಡೀಸಲ್ ಸೇರಿದಂತೆ) ಕಾರ್ಯಗತಗೊಳಿಸುತ್ತಿದ್ದು ಅವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಇವುಗಳ ಸ್ಥಾಪನಾ ಸಾಮರ್ಥ್ಯ ಒಟ್ಟು ಸುಮಾರು 993.31 ಮೆಗಾ ವ್ಯಾಟ್ಸ್ ಮಾರ್ಚ್ 1991ರ ಅಂತ್ಯದವರೆಗೆ ಈ ಯೋಜನೆಗಳಿಗೆ 647.87 ಕೋಟಿ ರೂ. ಖರ್ಚು ಮಾಡಲಾಗಿದೆ. ಈ ಯಲಹಂಕ ಯೋಜನೆಯ ಮೊದಲ ಘಟಕವನ್ನು ಮಾರ್ಚ್ 1992ರ ಅಂತ್ಯದೊಳಗೆ ಕಮೀಷನ್ ಮಾಡುವ ಉದ್ದೇಶವಿದ್ದು, ಇನ್ನುಳಿದ 5 ಘಟಕಗಳನ್ನು ಸೆಪ್ಟೆಂಬರ್ 1992ರ ಅಂತ್ಯದ ವೇಳೆಗೆ ಪ್ರತಿ ಘಟಕಗಳ ಮಧ್ಯೆ ಒಂದು ತಿಂಗಳ ಅಂತರದಂತೆ ಕಮೀಷನ್ ಮಾಡಲಾಗುವುದು. ಈ ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಒಂದು ವರ್ಷಕ್ಕೆ 720 ದಶಲಕ್ಷ ಯೂನಿಟ್ಟುಗಳ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದೆಂದು ಅಂದಾಜು ಮಾಡಲಾಗಿದೆ.

ಉ) ಕರ್ನಾಟಕ ವಿದ್ಯುತ್ ನಿಗಮದ 14 ಯೋಜನೆಗಳನ್ನು 1995ನೇ ಇಸವಿ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಗಳಿಂದ ವಾರ್ಷಿಕವಾಗಿ ಸುಮಾರು 3500 ದಶಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಶಫೀ ಅಹಮ್ಮದ್ : ತುಮಕೂರು ತಾಲ್ಲೂಕಿನ ಅಂತರಸಹಳ್ಳಿಯಲ್ಲಿ 220:66 ಕೆ ವಿ ಮತ್ತು 66:11 ಕೆ ವಿ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ತಾವು ಯಾವಾಗ ಕೆಲಸಗಳನ್ನು ಮುಗಿಸುತ್ತೀರಿ? ಹಾಗೂ ಅದಕ್ಕೆ ಹಾಕಬೇಕಾದಂತಹ ಟ್ರಾನ್ಸ್‌ಫಾರ್ಮರ್ಸ್ ಬಗ್ಗೆ ಆರ್ಡರ್ಸ್‌ಗಳನ್ನು ಕೊಟ್ಟಿದ್ದೀರಾ ಅಥವಾ ಇಲ್ಲವೇ? ಇನ್ನು ಪವರ್ \ ಪ್ರಾಜೆಕ್ಟ್ ಬಗ್ಗೆ ಹೇಳುತ್ತೇನೆ. ಎಲ್ಲಾ ಪವರ್ ಪ್ರಾಜೆಕ್ಟ್ ಸಹ ಅನ್ ಗೋಯಿಂಗ್ ಪ್ರಾಜೆಕ್ಟ್‌ಇದೆ. ಯಾವುದೇ ಪ್ರಾಜೆಕ್ಟ್ ಇನ್ನೂ ಕಂಪ್ಲೀಟ್ ಆಗುವ ಸ್ಟೇಜಿನಲ್ಲಿಲ್ಲ. ಈ ಪ್ರಾಜೆಕ್ಟ್‌ಗಳನ್ನು ಯಾವಾಗ ಮುಗಿಸುತ್ತೀರಿ? ಅದರಲ್ಲಿಯೂ ಸಹ ಬೆಂಗಳೂರಿನ ಯಲಹಂಕದಲ್ಲಿರುವ ಪ್ರಾಜೆಕ್ಟ್ ಕೆಲಸ ಶುರು ಮಾಡಿದ್ದೀರಾ? ಅದಕ್ಕೆ ಬೇಕಾದ ಸಲಕರಣೆಗಳ ಬಗ್ಗೆ ಆರ್ಡರ್ಸ್‌ನ್ನು ಪ್ಲೇಸ್ ಮಾಡಿದ್ದೀರೋ ಅಥವಾ ಇಲ್ಲವೋ ಇದರ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ : ಆದಷ್ಟು ಬೇಗ ಮಾಡುತ್ತೇವೆ.

ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣ

3297 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ?

ಆ) ಸರ್ಕಾರಿ ಒಡೆತನದ ಶಾಲೆಗಳಿಗೆ ಸಮಾನಾಂತರವಾಗಿ ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದ ವ್ಯಾಪಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಗಮನಕ್ಕೆ ಬಂದಿದ್ದರೆ ಈ ಶೋಷಣೆ ಮತ್ತು ದಂದೆ ತಪ್ಪಿಸಲು ಸರ್ಕಾರ ತೆಗೆದುಕೊಂಡು ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ನೀಡಲಾಗುತ್ತಿದೆ.

ಆ) ಇಲ್ಲಾ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಮಾನ್ಯ ಅಧ್ಯಕ್ಷರೇ, ಈಗ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂಬ ಬಗ್ಗೆ ನೀಡಲಾಗುತ್ತಿದೆ ಎಂದು ಉತ್ತರ ಹೇಳಿದ್ದಾರೆ. ರಾಜ್ಯ ಸರ್ಕಾರದ ನೀತಿಯಾದರೂ ಏನು? ರಾಜ್ಯ ಭಾಷೆ ಕನ್ನಡವನ್ನು ಕಲಿಸಬೇಕು ಎನ್ನುವುದು ಸರ್ಕಾರದ ನೀತಿ.

ಸರ್ಕಾರ ತನ್ನ ನೀತಿಗೆ ಬದ್ಧವಾಗಿದೆಯೇ? ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ಪ್ರಶ್ನೆ ಕೇಳಿ.